## ಅದು ಹೇಗೆ?

ಅಂದು ಸಂಬಂಧಿಕರೊಬ್ಬರ ಮದುವೆಗೆ ಹೋಗಬೇಕಾಗಿದ್ದ ಗುಂಡ ಎದುರಿಗೆ ಬಂದ ಆಟೊ ನಿಲ್ಲಿಸಿ, 'ಏನಪ್ಪಾ ಜಯನಗರಕ್ಕೆ ಬರುತ್ತೀಯಾ?' ಎಂದು ಕೇಳಿದ.

ಚಾಲಕ 'ಓ ಬನ್ನಿ ಸ್ವಾಮಿ! ಬರ್ತೇನೆ ಎಂದಾಗ, ಗುಂಡ 'ಎಷ್ಟು ಕೊಡಬೇಕಪ್ಪಾ?' ಎಂದು ಕೇಳಿದ. ಚಾಲಕ '350 ರೂಪಾಯಿ ಕೊಡಿ' ಎಂದ.

ಗುಂಡ– 'ಏನಪ್ಪಾ ಮೀಟರ್ ಹಾಕಿದರೆ 300 ರೂಪಾಯಿ ಆಗುತ್ತದೆ. ನೀನು ಜಾಸ್ತಿ ಕೇಳ್ತಾ ಇದೀಯಲ್ಲ. ನಾನು ಬೇಕಾದರೆ ನಿನ್ನನ್ನು ಫ್ರೀಯಾಗಿ ಕರೆದುಕೊಂಡು ಹೋಗ್ತೇನೆ' ಎಂದ.

ಚಾಲಕ ಚಕಿತನಾಗಿ 'ಏನು ಫ್ರೀಯಾಗಿ ಕರೆದುಕೊಂಡು ಹೋಗ್ತೀರಾ? ಅದು ಹೇಗೆ?' ಎಂದು ಕೇಳಿದ. ಆದಕ್ಕೆ ಗುಂಡ 'ನೀನು ಹಿಂದಿನ ಸೀಟಿನಲ್ಲಿ ಕುಳಿತುಕೋ ಗೊತ್ತಾಗುತ್ತದೆ' ಎಂದ!

**ಎಂ.ಕೆ. ಮಂಜುನಾಥ್**





## ಬುದ್ಧಿವಂತರಿಗೆ ಮಾತ್ರ

ಆ ಹಾಸ್ಯಗೋಷ್ಠಿ ಸ್ಪರ್ಧೆಯಲ್ಲಿ ನಾಗೇಶನೂ ಭಾಗವಹಿಸಿದ್ದ. ಆ ಸ್ಪರ್ಧೆಯ ನಿಯಮದ ಪ್ರಕಾರ ಮೊದಲನೆಯ ವಾಕ್ಯದಲ್ಲಿಯೇ ಎಲ್ಲರನ್ನು ನಗಿಸಬೇಕು ಎಂಬುದಾಗಿತ್ತು. ಸ್ಪರ್ಧೆಯಲ್ಲಿ ಎಲ್ಲರೂ ಏನೇನೋ ಹಾಸ್ಯದ ವಿಷಯಗಳನ್ನು ಹೇಳಿದರು. ಆದರೆ ಯಾರೊಬ್ಬರೂ ನಗಲೇ ಇಲ್ಲ.

ಕೊನೆಗೆ ನಾಗೇಶನ ಸರದಿಯೂ ಬಂತು. ಆತ ವೇದಿಕೆ ಏರಿದವನೇ 'ನೋಡಿ ನಾನು ಹೇಳುವ ಹಾಸ್ಯದ ವಿಷಯ ಬುದ್ಧಿವಂತರಿಗೆ ಮಾತ್ರವೇ ಅರ್ಥವಾಗುವುದು' ಎಂದು ಅವನು ಹೇಳಿದ್ದೇ ತಡ, ಎಲ್ಲರೂ ಆ ಕ್ಷಣವೇ ಗಹಗಹಿಸಿ ನಗತೊಡಗಿದರು!

**ಶಂಕರೇಗೌಡ ತುಂಬಕೆರೆ**